ದಿನಾಂಕಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಕೆ.ವಿ ಪ್ರತಿವಾದಿಗಳ ಪರ ವಕೀಲರಿಂದಃ

ನಿಮ್ಮ ಅಣ್ಣನ ಹೆಸರಿಗೆ ಆಗಿದೆ ಎಂದು ಹೇಳುವ ಕರಾರು ಪತ್ರವನ್ನು ಹಾಜರುಪಡಿಸುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿ ನಿಪಿ-1 ರ ಕರಾರು ಪತ್ರದ ಸಮಯದಲ್ಲಿ ನನ್ನ ಅಣ್ಣನ ಹೆಸರಿಗೆ ಆದ ಕರಾರು ಪತ್ರವನ್ನು ನಾಶಪಡಿಸಲಾಗಿದೆ ಎಂದು ನನ್ನ ಅಣ್ಣ ನನಗೆ ತಿಳಿಸಿದ ಕಾರಣ ಅದನ್ನು ಹಾಜರುಪಡಿಸಲು ಸಾಧ್ಯವಿಲ್ಲವೆಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಸರಿಗೆ ಆಗಿತ್ತು ಎಂದು ಹೇಳುವ ಕರಾರು ಪತ್ರದ ಮೂಲಕ ರೂ. 50,000/-ಗಳನ್ನು ನೀಡಿದ್ದರು ಎಂದು ನಾನು ಹೇಳಿದ್ದು ಸದರಿ ವಿಚಾರವನ್ನು ನಿಪಿ-1 ರ ಕರಾರು ಪತ್ರದಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ. ನನ್ನ ಅಣ್ಣನ ಹೆಸರಿಗೆ ದಿನಾಂಕ 02.01.2007 ರಂದು ಕರಾರು ಪತ್ರವಾಯಿತು ಎಂದರೆ ಸರಿ. ಸದರಿ ಕರಾರು ಪತ್ರ ಬರೆದ 3 ವರ್ಷ 4 ತಿಂಗಳ ನಂತರ ನಿಪಿ-1 ರ ಕರಾರು ಪತ್ರವನ್ನು ಬರೆಯಲಾಗಿದೆ ಎಂದರೆ ಸರಿ. ನಿಮ್ಮ ಅಣ್ಣನ ಹೆಸರಿಗೆ ಆದ ಕರಾರು ಪತ್ರದ ನಂತರ ಅವರ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಳ್ಳಲು ತೊಂದರೆ ಇತ್ತೆ? ಎಂಬ ಪ್ರಶ್ನೆಗೆ ಸಾಕ್ಷಿ ಆಸ್ತಿಯ ಮಾರಾಟಗಾರರು ದಾಖಲೆಗಳನ್ನು ಕೂಡಿಸುವುದರಲ್ಲಿ ವಿಳಂಬ ಮಾಡಿದರು ಹಾಗೂ ನನ್ನ ಅಣ್ಣ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದ ಕಾರಣ ಆಗಾಗ ಇಲ್ಲಿಗೆ ಬರಲು ಅವರಿಗೆ ತೊಂದರೆ ಆಗುತ್ತಿದ್ದ ಕಾರಣ ಕ್ರಯ ಪತ್ರವನ್ನು ಅವರ ಹೆಸರಿಗೆ ಮಾಡಿಸಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ಮಾರಾಟಗಾರರು ದಾಖಲೆಗಳನ್ನು ಸರಿಪಡಿಸುವುದರಲ್ಲಿ ವಿಳಂಬ ಮಾಡಿದ ಕಾರಣ ನನ್ನ ಅಣ್ಣನ ಹೆಸರಿಗೆ ಕ್ರಯ ಪತ್ರ ಮಾಡಿಸಿಕೊಳ್ಳಲಿಲ್ಲ ಎಂಬ ವಿಚಾರವನ್ನು ನಿಪಿ-1 ರಲ್ಲಿ ನಮೂದಿಸಲು ನಮಗೆ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಸದರಿ ವಿಚಾರವನ್ನು ನಮೂದಿಸುವುದು ಅವಶ್ಯಕತೆ ಇಲ್ಲ ಎಂದು ಮಾರಾಟಗಾರರೇ ಹೇಳಿ ನಿಪಿ-1 ರ ಕರಾರು ಪತ್ರವನ್ನು ಬರೆದುಕೊಟ್ಟರು ಎಂದು ನುಡಿಯುತ್ತಾರೆ.

ನನ್ನ ಅಣ್ಣನ ಹೆಸರಿಗೆ ಆದ ಕರಾರು ಪತ್ರದ 3 ವರ್ಷಗಳ ನಂತರ ನಾವು ಮಾರಾಟಗಾರರಿಗೆ ಕ್ರಯ ಪತ್ರ ಮಾಡಿಕೊಡಿ ಎಂದು ಯಾವುದೇ ತಿಳುವಳಿಕೆ ಪತ್ರವನ್ನು ಕಳುಹಿಸಲಿಲ್ಲ. ದಾಖಲೆಗಳನ್ನು ನಾವೇ ಸರಿಪಡಿಸಿಕೊಳ್ಳುತ್ತೇವೆ ಎಂದು ನಾವು ಹೇಳಿದ ಕಾರಣ ಮಾರಾಟಗಾರರು ದಾಖಲೆಗಳನ್ನು ಸರಿಪಡಿಸಿಕೊಳ್ಳಲು ಹೋಗಲಿಲ್ಲ ಎಂದರೆ ಸರಿಯಲ್ಲ. 3 ತಿಂಗಳೊಳಗೆ ಕ್ರಯ ಪತ್ರವನ್ನು ಬರೆದುಕೊಡುತ್ತೇವೆ ಎಂದು ನಿಪಿ-1 ರಲ್ಲಿ ಬರೆದಿದ್ದು ಸದರಿ 3 ತಿಂಗಳು ಕಳೆದ ನಂತರ ಪ್ರತಿವಾದಿಗಳಿಗೆ ತಿಳುವಳಿಕೆ ಪತ್ರ ನೀಡಲು ನಮಗೆ ತೊಂದರೆ

ಇರಲಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ಹಿರಿಯ ನಾಗರೀಕರು ಹಾಗೂ ವ್ಯವಸಾಯಗಾರರಾದ ಕಾರಣ ನಾವು ತಿಳುವಳಿಕೆ ಪತ್ರ ನೀಡದೆ ಕ್ರಯ ಪತ್ರ ಬರೆದುಕೊಡುತ್ತಾರೆ ಎಂದು ಕಾದೆವು ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಹಿರಿಯ ನಾಗರೀಕರು ಮತ್ತು ವ್ಯವಸಾಯಗಾರರಾಗಿದ್ದು ಅವರಿಗೆ ತಿಳುವಳಿಕೆ ಇಲ್ಲದಿದ್ದ ಕಾರಣ ದಾಖಲೆಗಳನ್ನು ನಾವೇ ಸರಿಪಡಿಸಿಕೊಳ್ಳುತ್ತೇವೆ ಎಂದು ನಾನು ಪ್ರತಿವಾದಿಗಳಿಗೆ ಹೇಳಿದ್ದೆನು ಎಂದರೆ ಸರಿಯಲ್ಲ. ನಾವು ದಾಖಲೆಗಳನ್ನು ಸರಿಪಡಿಸಿಕೊಳ್ಳದ ಕಾರಣ ನಿಗದಿತ ಸಮಯದೊಳಗೆ ಪ್ರತಿವಾದಿಗಳಿಗೆ ಹಣವನ್ನು ನೀಡಲಿಲ್ಲ ಹಾಗೂ ಕ್ರಯ ಪತ್ರವನ್ನು ಬರೆಸಿಕೂಳ್ಳಲು ಮುಂದಾಗಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ 7 ವರ್ಷಗಳ ಕಾಲ ಕಾಲಹರಣ ಮಾಡಿರುವ ಕಾರಣ ಈ ದಾವೆಯಲ್ಲಿ ಕೇಳಿರುವ ಪರಿಹಾರಗಳನ್ನು ಪಡೆದುಕೊಳ್ಳಲು ನಾವು ಅರ್ಹರಲ್ಲ ಎಂದರೆ ಸರಿಯಲ್ಲ. 2021 ರ ವರೆಗೆ ಕ್ರಯ ಪತ್ರವನ್ನು ಬರೆಸಿಕೊಳ್ಳಲು ಕಾನೂನಿನ ಅಡಿಯಲ್ಲಿ ನಮಗೆ ಅವಕಾಶವಿರಲಿಲ್ಲವಾದ ಕಾರಣ ಕ್ರಯ ಪತ್ರವನ್ನು ಬರೆಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾವು ನೀಡಿದ ರೂ. 1,00,000/-ವನ್ನು ಹಿಂತಿರುಗಿಸುತ್ತೇವೆ ಎಂದು ಪ್ರತಿವಾದಿಗಳು ತಮ್ಮ ಪ್ರತ್ಯುತ್ತರ ನೋಟೀಸಿನಲ್ಲಿ ತಿಳಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳಿಂದ ಯಾವುದೇ ತಪ್ಪುಗಳು ಆಗದಿದ್ದರೂ ಸಹ ನ್ಯಾಯಬದ್ಧವಾಗಿ ರೂ. 1,00,000/-ವನ್ನು ಹಿಂತಿರುಗಿಸುತ್ತೇವೆ ಎಂದು ಪ್ರತಿವಾದಿಗಳೂ ಒಪ್ಪಿಕೊಂಡಿದ್ದರು ಎಂದರೆ ಸಾಕ್ಷಿ ಪ್ರತಿವಾದಿಗಳಿಂದಲೇ ವಿಳಂಬವಾದ ಕಾರಣ ಕ್ರಯ ಪತ್ರವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ 3 ನೇ ಪ್ರತಿವಾದಿಯ ಸಹಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಿಪಿ-1 ರಲ್ಲಿ 3 ನೇ ಪ್ರತಿವಾದಿಯ ಸಹಿ ಇರುವುದಿಲ್ಲ ಆದರೆ ಸದರಿ ಕರಾರು ಪತ್ರದ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆದ ಕಾರಣ ನಿಪಿ-1 ಕ್ಕೆ ಅವರ ಮಕ್ಕಳ ಸಹಿಗಳೂ ಸಹ ಬೇಕಾಗಿರಲಿಲ್ಲ ಆದರೆ ಆ ದಿನ 2 ನೇ ಪ್ರತಿವಾದಿ ಬಂದಿದ್ದು ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ ಹಾಗೂ ಆ ದಿನ 3 ನೇ ಪ್ರತಿವಾದಿ ಬಂದಿಲ್ಲದ ಕಾರಣ ಅವರು ಸಹಿ ಮಾಡಿರುವುದಿಲ್ಲ ಹಾಗೂ ಅದು ಅವರ ತಲೆನೋವು ಎಂದು ನುಡಿಯುತ್ತಾರೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಈ ದಾವೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಆದರೆ ಅದು ಅವರ ಸ್ವಯಾರ್ಜಿತ ಆಸ್ತಿ ಎಂದು ನಿಪಿ-1 ರ ಕರಾರು ಪತ್ರದಲ್ಲಿ ಬರೆದಿದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯೋ ಅಲ್ಲವೋ ಎಂದು ತಿಳಿದುಕೊಳ್ಳಲು ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ನಿಪಿ-1 ರ ಷೆಡ್ಯೂಲ್ ಸ್ವತ್ತು 3 ಜನ ಮಾರಾಟಗಾರರ ಸ್ವಂತ ಸ್ವಾಧೀನಾನುಭವದಲ್ಲಿರುವ ಜಮೀನು ಎಂದು ನಿಪಿ-1 ರ 1 ನೇ ಪುಟದ 3 ನೇ ಕಂಡಿಕೆಯಲ್ಲಿ ಬರೆಯಲಾಗಿದೆ ಎಂದರೆ ಸರಿ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು ಅದರಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ ಹಾಗೂ ಅವರ ಉಳಿದ ಕುಟುಂಬದ ಸದಸ್ಯರಿಗೆ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ಮತ್ತು ಪ್ರತಿವಾದಿಗಳಿಗೆ ತಿಳಿಸದೆ ನಿಪಿ-1 ರ ಕರಾರು ಪತ್ರವನ್ನು ಸೃಷ್ಠಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. 2014 ರಿಂದ ದಾವಾ ಆಸ್ತಿಯ ಮಾರುಕಟ್ಟೆ ಬೆಲೆಯು ಗಗನಕ್ಕೇರಿರುವ ಕಾರಣ ಕಾಲಮಿತಿ ಮೀರಿರುವ ನಿಪಿ-1 ರ ಕರಾರು ಪತ್ರವನ್ನು ಬಳಸಿಕೊಂಡು ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು